ರನ್ನನನ್ನು ಬೀಳ್ಕೊಡುವಾಗ ಅತ್ತಿಮಬ್ಬೆ ತನ್ನ ಗುಂಡುಮಬ್ಬೆಯ ಆಭರಣ ವನ್ನೆಲ್ಲ ಶಾಂತಿಗೂ ಜಕ್ಕಿಗೂ ಧಾರಾಳವಾಗಿ ಕೊಟ್ಟಳು. ಬಡವರ ಮನೆಯ ಆ ಹೆಣ್ಣುಮಕ್ಕಳು ನಿಲವು ಆಭರಣವನ್ನು ದರಿಸಿ ಹಿಗ್ಗಿದರು !ಅತ್ತಿಮಬ್ಬೆಯನ್ನು ಮಾನವಳಲ್ಲ ದೇವತೆಯೆಂದು ಕೊಂಡಾಡಿದರು. ತೌರುಮನೆಯನ್ನು ಬಿಡಾವಾಗ ಎಷ್ಟು ಸಂಕಟವಗುವುದೋ ಅಷ್ಟೇ ಸಂಕಟ ಅವರಿಗೆ ಅತ್ತಿಮಬ್ಬೆಯಿಂದ ಬೀಳ್ಕೊಂಡು ತಲಕಾಡಿಗೆ ಹೋಗುವಾಗ ಆಯಿತು.

ಸೊಸೆಯರನ್ನು ಕಳಿಸಿಕೊಟ್ಟ ಮೇಲೆ ಅತ್ತಿಮಬ್ಬೆ ತುಸು ಮಕಾದಳು. ಮದುವೆ ಸಂಭ್ರಮವೆಲ್ಲ ಮುಗಿದು ಮನೆ ಬಿಕೋ ಎನಿಸಿತು. ತಮ್ಮಿಂದಾಗಿ ರಾಷ್ಟ್ರಕೂಟ ಸಾಮ್ರಾಜ್ಯಪತನವಾಯಿತಲ್ಲ ಎಂದು ಅತ್ತಿಮಬ್ಬೆ ಮರುಗಿದಳು. ಸಮಾಜಕ್ಕೆ ಇದರಿಂದಾದ ನಷ್ಟವನ್ನು ತಾನು ಸರಿಪಡಿಸಲು ಸಾಧ್ಯವೇ ಎಂದು ಚಿಂತಿಸಿದಳು. ಈ ವೇಳೆಯಲ್ಲಿ ನಮ್ಮ ಗುಂಡು ಇದ್ದಿದ್ದರೆ ಖಂಡಿತ ಧೈರ್ಯ ಹೇಳಿ ಮಾರ್ಗದರ್ಶನ ಮಾಡುತ್ತಿದ್ದಳೆಂದು ಹಲುಬಿದಳು. ಒಮ್ಮೆ ತನ್ನ ಅತ್ತೆಯನ್ನು ಕಂಡು "ಅತ್ತೆ, ನಾವೇ ರಾಷ್ಟ್ರಕೂಟರನ್ನು ಹಾಳುಮಾಡಿದಂತಾಯಿತಲ್ಲವೇ ?" ಎಂದು ಪ್ರಶ್ನಿಸಿದಳು.

"ಅತ್ತಿ, ಏನೇನೋ ತಲೆಗೆ ಹಾಕಿಕೊಳ್ಳುತ್ತಿರುವೆ ! ಬಬ್ಬರು ಇನ್ನೊಬ್ಬರನ್ನು ಹಾಳುಮಾಡಲಾದೀತೆ ? ರಾಷ್ಟ್ರಕೂಟರ ಪುಣ್ಯ ಮುಗಿಯಿತು. ಅದಂರಿದ ಅವರ ಸಾಮ್ರಾಜ್ಯ ಮುಳುಗಿತು. ರಾಷ್ಟ್ರಕೂಟರೂ ಎಷ್ಟೋ ಬಾರಿ ಚಾಳುಕ್ಯರನ್ನು ಸೋಲಿಸಿ ತಮ್ಮ ಸಾಮ್ರಾಜ್ಯವನ್ನು ಹಬ್ಬಿಸಲಿಲ್ಲವೇ ? ಅವರಿಗೆ ಇಳಿಗಾಲ ಬಂದಿತು. ಅವರು ಸೋತರು. ಅದಕ್ಕೆ ನಾವು ಎಷ್ಟರ ಮಟ್ಟಿಗೆ ಕಾರಣದೇವು ?ನಾವಿಲ್ಲದಿದ್ದರೆ ಇನ್ನಾರೋ ಸೋಲಿಸುತ್ತಿದ್ದರು" ಎಂದು ಪದ್ಮಬ್ಬೆ ಸಮಾಧಾನ ಹೇಳಿದಳು.

"ಅತ್ತೆ ಅಜಿತಸೇನಾಚಾರ್ಯರು ರನ್ನನ ಕೈಲಿ ಏನೋ ಹೇಳಿಕಳಿಸಿರುವರು . . . ."

"ಏನೆಂದು ಹೇಳಿ ಕಳಿಸಿರುವರು ? ಆಶ್ರಮಕ್ಕೆ ಏನಾದರೂ ಹಣ ಬೇಕೆಂದು ಹೇಳಿ ಕಳಿಸಿರುವರೇನು ?"

“ಆಶ್ರಮಕ್ಕೆ ಅಂತ ಏನನ್ನೂ ಅವರು ಕೇಳಿಲ್ಲ. ನಮ್ಮ ಧರ್ಮವನ್ನೂ ಸಂಸ್ಕೃತಿಯನ್ನೂ, ಸಾಹಿತ್ಯವನ್ನೂ ಈಗ ನಾವೇ ಉಳಿಸಿಕೊಡಬೇಕೆಂತೆ !” ಎಂದು ಅತ್ತಿಮಬ್ಬೆ ಮಾತನ್ನು ಅರ್ಧಕ್ಕೆ ನಿಲ್ಲಿಸಿದಳು.

“ಅದಕ್ಕೆಲ್ಲ ನಾನು ಅಡ್ಡೀಪಡಿಸಿಯೇನೆ ? ಅಥವ ನಮ್ಮವರಾದರೂ ಅಡ್ಡಿಪಡಿಸಿಯಾರೆ ? ಏನೇನು ಬೇಕೋ ಅದನ್ನೆಲ್ಲ ಮಾಡಿಸಿಬಿಡು. ದೇವರು ಕೊಟ್ಟಿರುವಾಗ ಅದನ್ನೆಲ್ಲ ಮಾಡಿ ಮುಗಿಸುವುದೇ ಮೇಲು.”

ಮೊದಲನೆಯದಾಗಿ ಅಹಿಂಸೆಯ ಪ್ರಸಾರವಾಗಬೇಕು. ಈಗಾಗಲೆ ಈಮತಸ್ವೀಕಾರ ಮಾಡಿರುವರಲ್ಲಿ ಸಂಸ್ಕಾರವನ್ನು ನೆಲೆಗೊಳಿಸಬೇಕು. ಜಿನಾಲಯಗಳ ಜೀರ್ಣೋದ್ಧಾರ ಆಗಬೇಕಾಗಿದೆ. ಆವಶ್ಯಕತೆ ಇರುವ ಕಡೆ ಜಿನಾಲಯಗಳನ್ನು ನಿರ್ಮಿಸ ಬೇಕು. ಜೈನಾಗಮ ಯಾವ ಯಾವ ರೂಪದಲ್ಲಿಯೋ ಅದನ್ನೆಲ್ಲ ಪ್ರತಿ ಮಾಡಿಸಿ ಸಂರಕ್ಷಿಸಬೇಕು. ಇಷ್ಟಕ್ಕೂ ಹಣ ಎಷ್ಟು ಬೇಕೋ ಏನೋ”

“ಅತ್ತಿ, ಹಣದ ಯೋಚನೆ ಮಾಡಬೇಡ. ಇರುವುದನ್ನೆಲ್ಲ ಖರ್ಚುಮಾಡಿದರೂ ನಮಗೇನೂ ಭಯವಿಲ್ಲ. ಈಗ ನನ್ನ ಮೊಮ್ಮಗ ಮಹಾರಾಜನಾಗಿರುವನು ! ನಾವೆಲ್ಲಕಲ್ಪವೃಕ್ಷದ ಅಡಿ ಕುಳಿತಿರುವೆವು ! ಏನು ಬೇಕಾದರೂ ಮಾಡು”ಎಂದು ಪದ್ಮಬ್ಬೆ ಧೈರ್ಯ ಹೇಳಿದಳು.

ಅತ್ತಿಮಬ್ಬೆಗೆ ಪ್ರವಚನ ವಾತ್ಸಲ್ಯ ಸಂಸ್ಕಾರದಿಂದಲೇ ಬಂದಿತ್ತು. ಈಕೆಯ ತಂದೆ, ಅಜ್ಜ ಇವರೆಲ್ಲ ಹತ್ತಾರು ಜನ ಕವಿಗಳನ್ನು ಮನೆಯಲ್ಲೇ ಸಾಕಿಕೊಂಡಿದ್ದರು. ಕವಿ ಕುಂಟುಂಬಕ್ಕೆ ನೀರಿನಂತೆ ಹಣ ಕೊಟ್ಟಿದ್ದರು. ಅಂಥ ಮನೆತನದಲ್ಲಿ ಜನಿಸಿದ ಅತ್ತಿಮಬ್ಬೆಗೆ ಸಹೃದಯತೆ ಇದ್ದರೆ ಆಶ್ಚರ್ಯವೇ ?

ಅತ್ತಿಮಬ್ಬೆ ನೂರಾರು ಜನ ಲಿಪಿಗಾರರನ್ನು ಕರೆಸಿದಳು. ಬಂಕಾಪುರದಿಂದ, ತಾನು ಬಸುರಿಯಾದಾಗ ತರಿಸಿಕೊಂಡ ಗ್ರಂಥರಾಶಿಯನ್ನೆಲ್ಲ ನೂರು ನೂರು ಪ್ರತಿ ಮಾಡಿಸ ಬೇಕೆಂದು ಯೋಜನೆ ಹಾಕಿದಳು. ಈಕೆಯ ಆಲೋಚನೆಯನ್ನು ಕೇಳಿ ದಲ್ಲಪ ಬೆರಗಾದನು. ಮಲ್ಲಪ ತಲೆದೂಗಿದನು. ನೂರಾರು ಆನೆಗಳ ಮೇಲೆ ಓಲೆಗರಿಯನ್ನು ತರಿಸಿದಳು. ಓಲೆಯ ಮೇಲೆ ಬರೆಯಲು ಹದವಾದ ಸಹಸ್ರಾರು ಕಂಟಗಳನ್ನು ಮಾಡಿಸಿದಳು. ಈಕೆ ಕಂಟವನ್ನು ಮಾಡಿಸಿದ್ದು

ಕಬ್ಬಿಣದಲ್ಲಲ್ಲ. ಬೆಳ್ಳಿಯಲ್ಲೂ ಅಲ್ಲ. ಬಂಗಾರದಲ್ಲಿ ಕಂಟಗಳನ್ನು ದಾನಮಾಡಿ ಬಿಡುತ್ತಿದ್ದಳು. ವರ್ಷಾನುಗಟ್ಟಲೆ ಈ ಕಾರ್ಯಸಾಗಿತು ! ಹಿಂದೆಂದೂ ಇಷ್ಟೊಂದುವ್ಯಾಪಕವಾಗಿ ಪ್ರತಿಯೆತ್ತುವ ಕಾರ್ಯವನ್ನು ಯಾರೂ ಮಾಡಿರಲಿಲ್ಲ .ದಾನಚಿಂತಾಮಣಿ ಅತ್ತಿಮಬ್ಬೆ ಸಹಸ್ರಾರು ಗ್ರಂಥಗಳನ್ನು ಬಂಗಾರದ ಲೇಖಣಿಯಲ್ಲಿ ಬರೆಸಿ ಜೈನ ಮಠಗಳಿಗೆ ದಾನವಾಗಿ ಕೊಟ್ಟಳು. ಜೈನ ಸನ್ಯಾಸಿಗಳಿಗೆ ಶಾಸ್ತ್ರದಾನ ಮಾಡಿದಳು ! ಏಳೆಂಟು ವರ್ಷ ಕುಳಿತು ಪ್ರತಿಮಾಡಬೇಕಾದ ಧವಳ ಜಯಧವಳಗಳನ್ನೂ ನೂರು ಪ್ರತಿಮಾಡಿಸಿ ಜೈನಾತಿಶಯ ಕ್ಷೇತ್ರಗಳಿಗೆ ಕಳಿಸಿಕೊಟ್ಟಳು.

ಅತ್ತಿಮಬ್ಬೆ ಲೌಕಿಕದಲ್ಲಿ ವಿಮುಖಳಾಗಿ ಆಧ್ಯಾತ್ಮಿಕದ ಕಡೆ ಹೊರಳಿದಳು. ಮನೆಯಲ್ಲಿದ್ದುಕೊಂಡೇ ತಪವೆಸಗಿದಳು. ಜೈನಮುನಿಗಳ ಸೇವೆ ಮಾಡಲು ಸದಾ ಹಂಬಲಿಸಿದಳು. ಜಿನಾಲಯಗಳ ಜೀರ್ಣೋದ್ಧಾರಕ್ಕಾಗಿ ಧನವನ್ನು ಧಾರಾಳವಾಗಿ ಖರ್ಚು ಮಾಡಿದಳು. ಎಲ್ಲೆಲ್ಲಿ ಶ್ರಾವಕರು ಹೆಚ್ಚಾಗಿದ್ದು ಜಿನಾಲಯವಿಲ್ಲದೆ ಇತ್ತೋ ಅಲ್ಲೆಲ್ಲ ಜಿನಾಲಯ ನಿರ್ಮಿಸಲು ತಾನೇ ಹಣಕೊಟ್ಟಳು. ಲಕ್ಕುಂಡಿಯ ಜಿನಾಲಯವನ್ನು ತ್ರಿಭುವನ ಚೂಡಾಮಣಿಯಾಗುಂತೆ ಅಪೂರ್ವ ಶಿಲ್ಪಿಗಳಿಂದ ಕಟ್ಟಿಸಿದಳು. ಅಗ್ರಹಾರಗಳನ್ನು ದತ್ತಿಯಾಗಿ ಬಿಟ್ಟಳು. ಈಕೆಯ ನೇತೃತ್ವದಲ್ಲಿ ಸಹಸ್ರಾರು ಜಿನಾಳಯಗಳು ನಿರ್ಮಾಣವಾದವು .ಈಕೆಯ ದಾನದರ್ಮದಿಂದಾಗಿ ದಿನವೂ ಸಹಸ್ರಾರು ಜಿನಬಿಂಬಗಳಿಗೆ ಪಂಚಾಮೃತಾಭಿಷೇಕವಾಗುತ್ತಿತ್ತು.

ಕನ್ನಡ ಸಾಹಿತ್ಯದ ಕಡೆ ಈಕೆ ವಿಶೇಷ ಗಮನ ಕೊಟ್ಟಳು. ಸಂಸ್ಕೃತ ಪ್ರಾಕೃತ, ಅರ್ಧಮಾಗಧಿ ಗ್ರಂಥಗಳು ಭಾರತೀಯರಿಗೆಲ್ಲ ಸಂಬಂಧಪಟ್ಟವು. ಅವನ್ನು ಯಾರು ಬೇಕಾದರೂ ಪ್ರತಿಮಾಡಿಸುವರು. ದುರ್ವಿನೀತ, ಜಯಬಂಧು, ಕುಮದೇಂದು, ಗುಣವರ್ಮ ಇವರ ಅಚ್ಚ ಕನ್ನಡ ಕೃತಿಗಳನ್ನೂ, ಪಂಪನ ಆದಿಪುರಾಣ, ವಿಕ್ರಮಾರ್ಜುನ ವಿಜಯ, ಪೊನ್ನನ ಭುವನೈಕರಾಮಾಭ್ಯುದಯ ಹಾಗು ಶಾಂತಿಪುರಾಣ ಇವನ್ನು ಪ್ರತಿಮಾಡಿಸಿದರೆ ಕನ್ನಡಿಗರೇ ಮಾಡಿಸಬೇಕು. ಕನ್ನಡಿಗರೂ ಇವನ್ನು ನಿರ್ಲಕ್ಷಿಸಿದರೆ ಇನ್ನಾರು ಓದಬೇಕು ಎಂದು ಅತ್ತಿಮಬ್ಬೆ ಚಿಂತಿಸಿದಳು. ಉಳಿದ ಗ್ರಂಥಗಳನ್ನು ಕೇವಲ ನೂರು ನೂರು ಪ್ರತಿ ಮಾಡಿಸಿದರೆ ಅಚ್ಚಕನ್ನಡ ಕೃತಿಗಳಲ್ಲಿ ಒಂದೊಂದನ್ನೂ ಸಹಸ್ರ ಸಹಸ್ರವಾಗಿ ಪ್ರತಿಮಾಡಿಸಿದಳು ! ರಾಜಮಹಾರಾಜರೂ ಇಷ್ಟೊಂದು ಪ್ರತಿ ಮಾಡಿಸಿರಲಿಲ್ಲ. ಅತ್ತಿಮಬ್ಬೆ ಕವಿಕುಲ

ಚಿಂತಾಮಣಿಯಾದಳು !ಒಂದು ಸಾವಿರ ಐನೂರು ಜಿನಬಿಂಬಗಳನ್ನು ಚೊಕ್ಕ ಬಂಗಾರದಲ್ಲಿ ಈಕೆ ಮಾಡಿಸಿ ನವದಂಪತಿಗಳನ್ನು ಮನೆಗೆ ಕರೆದು ಗ್ರಂಥಗಳನ್ನೂ ಜಿನಬಿಂಬಗಳನ್ನೂ ಬಾಗಿನವಾಗಿ ಕೊಟ್ಟು "ನೋಡಿ, ನೀವಿಬ್ಬರೂ ಆದರ್ಶ ದಂಪತಿಗಳಾಗಬೇಕು. ಈಗ್ರಂಥಗಳನ್ನು ಓದಿಕೊಳ್ಳಿ ,ಜಿನಬಿಂಬಕ್ಕೆ ತಪ್ಪದೆ ಪೂಜೆಮಾಡಿ, ನಿಮ್ಮ ಕಷ್ಟಕಾರ್ಪಣ್ಯವೆಲ್ಲ ಕನಸಿನಂತೆ ಕರಗುವುದು" ಎಂದು ಹಾರೈಸುತ್ತಿದ್ದಳು.

"ಆಗಲಿ ತಾಯಿ. ತಮ್ಮ ಮಾತಿನಂತೆ ಖಂಡಿತ ನಡೆಯುವೆವು" ಎಂದು ದಂಪತಿಗಳು ಮಾತುಕೊಡುತ್ತಿದ್ದರು.

"ಇಡೀ ನಿಮ್ಮ ಬಾಳಿನಲ್ಲಿ ಯಾವುದಾದರೂ ಪುಣ್ಯಚರಿತೆಯನ್ನು ಐದಾದರೂ ಪ್ರತಿ ಎತ್ತಿಸಿ ಶಾಸ್ತ್ರದಾನ ಮಾಡುವುದಾಗಿ ನನಗೆ ಮಾತುಕೊಡಿ" ಎಂದು ಅತ್ತಿಮಬ್ಬೆ ಕೇಳುತ್ತಿದ್ದಳು.

"ಹಾಗೇ ಆಗಲಿ ತಾಯಿ, ತಮ್ಮ ಆಶೀವಾದ ಇದ್ದರೆ ಐದೇಕೆ ಐವತ್ತನ್ನು ಪ್ರತಿ ಮಾಡಿಸುವೆವು" ಎಂದು ಅವರು ಮನಸಾರೆ ನುಡಿಯುತ್ತಿದ್ದರು. ಅತ್ತಿಮಬ್ಬೆಯ ದಾನ ಒಂದಕ್ಕೆ ಹತ್ತಾಗಿ ಹತ್ತಕ್ಕೆ ನೂರಾಗಿ ಕವಲೊಡೆದು ಕೊನರುತ್ತ ಹೋಯಿತು. ಕನ್ನಡ ನಾಡಿನ ದಂಪತಿಗಳೆಲ್ಲ ಗ್ರಂಥರಾಶಿಯನ್ನು ಉಳಿಸಲು ಹಾಗು ಬೆಳೆಸಲು ಪಣತೊಟ್ಟರು .ಇಡೀ ಜನಾಂಗದಲ್ಲೇ ಸಾಹಿತ್ಯಾಭಿರುಚಿ ಮೂಡಿದಗ ಲೇಖಕರಿಗೆ ಅರ್ಜರಿಂದ ಏನಾಗಬೇಕು ?

ಅತ್ತಿಮಬ್ಬೆ ಬಂಕಾಪುರಕ್ಕೆ ಹೋಗಿ ಅಜಿತಸೇನಾಚಾರ್ಯರ ದರ್ಶನ ಮಾಡಿದಳು. ತನ್ನ ಮಗ ಅಣ್ಣಿಗನನ್ನೂ ಅವರ ಪಾದದಲ್ಲಿ ಕೆಡವಿ "ಮಹಾಸ್ವಾಮಿ , ನಮ್ಮ ವಂಶಕ್ಕೆ ಉಳಿದಿರುವುದು ಇದೊಂದೇ ಮಗು ! ಇವನು ಧರ್ಮಪರಾಯಣನಾಗಿ ನೂರು ೞಅರ್ಷ ಬಾಳುವಂತೆ ಹರಸಬೇಕು" ಎಂದು ಅಂಗಲಾಚಿದಳು.

"ನೂರು ವರ್ಷ ಪೂರ್ತಿಯಾಗಿ ಬಾಳಬೇಕೆ ತಾಯಿ ?" ಎಂದು ಆಚಾರ್ಯರು ಮುಗುಳ್ನಗುತ್ತ ಕೇಳಿದರು.

"ಸ್ವಾಮಿ ,ನಾವೆಲ್ಲ ಕಲೆತು ರಾಷ್ಟ್ರಕೂರಟ ಪತನಕ್ಕೆ ಕಾರಣರಾದೆವು. ಆ ಮಹನೀಯರು ಇದ್ದಿದ್ದರೆ ನಮ್ಮ ಸಮಾಜಕ್ಕೆ ಏನೇನು ಶ್ರೇಯಸ್ಸಾಗುತ್ತಿತ್ತೋ ಏನೋ .ನಾನೂ ನನ್ನ ಮಗನೂ ನೂರುನೂರು

ವರ್ಷ ಬದುಕಿ ಸಾಮಾಜಿಕ ಹಗೂ ಧಾರ್ಮಿಕ ಸೇವೆಯೆಸಗಬೇಕು. ನಾನು ಆಯುಸ್ಸನ್ನು ಕೇಳಿತ್ತಿರುವುದು ಲಂಪಟರಾಗಿ ಅಲೆದಾಡು ವುದಕ್ಕೆ ಸ್ವಾಮಿ. ಬಾಳಿನ ಒಂದೊಂದು ಕ್ಷಣವನ್ನೂ ಅಹಿಂಸಾಧರ್ಮದ ಪ್ರಭಾವನೆಗಾಗಿ ಕಳೆಯಿತ್ತಿರುವೆನು ಸ್ವಾಮಿ. ಇಂಥ ಧರ್ಮಾನುರಾಗ ಕೊನೆತನಕ ನನ್ನಲ್ಲಿ ಉಳಿಯಲಿ. ನನ್ನ ಮಗನಲ್ಲೂ ಈ ಶುಭಪರಿಣಾಮವೆ ಬರಲಿ" ಎಂದು ಅತ್ತಿಮಬ್ಬೆ ಕಂಬನಿಮಿಡಿಯುತ್ತ ನುಡಿದಳು.

"ಅಬ್ಬೆ, ನೀನು ಸಮ್ಯಾನ ಹೆಣ್ಣಲ್ಲಮ್ಮ ! ಜಿನಶಿಶುವನ್ನು ಲೊಕಕ್ಕಿತ್ತ ಜಿನಮಾತೆಯರು ಎಷ್ಟು ಹಿರಿಯರೋ ನೀನೂ ಅಷ್ಟೇ ಹಿರಿಯಳಾಗಿರುವೆ .ಆದಿದೇವನ್ನು ಹೆತ್ತು ಮರುದೆವಿ ಮಾತಾಯಿ ಲೋಕಕಲ್ಯಾಣವೆಸಗಿದಂತೆ ನೀನು ಅಣ್ಣಿಗನ ತಾಯಾಗಿ ವಿಶ್ವಾನುಕಂಪದಿಂದ ಲೋಕೋದ್ಧಾರ ಮಾಡುತ್ತಿರುವೆ. ರಾಜಮಹಾರಾಜರು ಜನ ಮೆಚ್ಚಿಗೆಗೆ ಅಷ್ಟೋ ಇಷ್ಟೋ ಧಾರ್ಮಿಕ ಚಟುವಟಿಕೆಯಲ್ಲಿ ಭಾಗವಹಿಸಿದಂತೆ ನಟಿಸುವರಷ್ಟೇ. ಕನ್ನಡ ನಾಡಿನ ಯಾವ ಮಹಾರಾಜನೂ ನಿನ್ನ ಸಮಕ್ಕೆ ತೂಗಲಾರ. ನೀನು ಶೀಲಸಂಪನ್ನೆಯಾಗಿ ಕನ್ನಡಕನ್ನೆಯರ ನಮ್ಮ ಸಂಸ್ಕೃತಿಯ ಮುಕುಟಮಣಿಯಾಗಿ ರಾರಾಜಿಸುತ್ತಿರುವೆ ! ರಾಷ್ಟ್ರಕೂಟರ  ಪತನವಾದಾಗ ಜೈನಧರ್ಮದ ಕಥೆ ಮುಗಿಯಿತೆಂದು ನಾವು ಹೆದರಿದ್ದೆವು .ಆದರೆ ನಿನ್ನಂಥ ಮಹಿಳಾರತ್ನಗಳು ಶತಮಾನಕ್ಕೆ ಬಬ್ಬರು ಬಂದರೂ ಸಾಕು ಅಹಿಂಸೆಗೆ ಅಳಿವಿಲ್ಲ !"

"ಮಹಾಸ್ವಾಮಿ, ನನ್ನನ್ನು ಅತಿಯಾಗಿ ಕೊಂಡಾಡಬೇಡಿ. ಎಲ್ಲಾದರೂ ತಲೆ ತಿರುಗೀತು ! ಯಾವ ಕಾಲಕ್ಕೆ ಯಾವ ಬುದ್ಧಿಯೋ !" ಎಂದು ಅತ್ತಿಮಬ್ಬೆ ಗಾಬರಿಗೊಂಡು ನುಡಿದಳು.

"ಅಮ್ಮಾಜಿ, ತಾವು ಪಕ್ವಕ್ಕೆ ಬಂದು ಹಣ್ಣಾಗಿರುವಿರಿ. ಶತಮಾನ ಶತಮಾನಗಳ ಕಾಲ ಪರ್ವತದ ಪದತಲದಲ್ಲಿ ಬಿದ್ದು ಇಜ್ಜಲು ಅದರ ಗುರು ಭಾರವನ್ನು ಆತು ಸಹಿಸಿಕೊಂಡಾಗ ಆ ಇಜ್ಜಲೇ ವಜ್ರವಾಗಿ ಬಿಡುವುದು. ಈಗ ನೀವೂ ವಜ್ರವಾಗಿರುವಿರಿ ! ನಾನು ಕಾಡಿನಲ್ಲಿ ಕುಳಿತು ಸಾಧಿಸಿದ್ದವು ನೀನು ಮನೆಯಲ್ಲೇ ಇದ್ದುಕೊಂಡು ಕರ್ಮಯೋಗಿಯಾಗಿ ಸಾಧಿಸಿರುವೆ ಮಗು. ನಿನ್ನ ಬಾಳ್ವೆ ಎಷ್ಟು ಭವ್ಯವಾಗಿದೆಯೋ ಅದಂಕ್ಕಿತಲೂ ಹೆಚ್ಚಾಗಿ ನಿನ ಮಗನ ಬಾಳ್ವೆ ಇನ್ನೂ ಪುಣ್ಯಪ್ರಾದವಾಗಿರುವುದು. ಅತ್ತಿಮಬ್ಬೆ ನೀನು ಧರ್ಮಸಾಮ್ರಾಜ್ಯದ ಸಾಮ್ರಾಜ್ಞಿ ! ನೀನಿದ್ದ ಕ್ಷೇತ್ರವೇ

ಪುಣ್ಯಕ್ಷೇತ್ರ ನಿನ ಅಂತರಂಗದಲ್ಲೇಳುವ ಭಾವನೆಗಳಲ್ಲ ಶುಭಭಾವನೆಗಳೇ ! ವಾಕ್ ಸಿದ್ಧಿ ಬಂದಿದೆ. ಚೀನು ಮುಟ್ಟಿದ್ದೆಲ್ಲ ಬಂಗಾರವಾಗಿ ಬಿಡುವುದು !" ಎಂದು ಅಜಿತಸೇನಾ ಚಾರ್ಯ್ಯರು ಆಕೆಯನ್ನು ಭಾವಾವೇಶದಿಂದ ಕೊಂಡಾಡಿದರು.

"ಸ್ವಾಮಿ ನಾನು ಮುಟ್ಟಿದ್ದು ಬಂಗಾರವಾಗುವುದು ಯಾರಿಗೆ ಬೇಕು ?ತಮ್ಮ ಪಾದಧೂಳಿಗಿಂತ ಬಂಗಾರ ದೊಡ್ಡದೆ ? ನನ್ನ ಎರಡು ಕೈಯೂ ತಮ್ಮ ಪಾದಧೂಳಿ ಯಿಂದ ಸದಾ ರಂಜಿಸಲಿ ! ನನ್ನ ಎರಡು ಕಣ್ಣಿಗೂ ತಮ್ಮ ಪಾದಧೂಳಿ ಕಾಡಿಗೆಯಾಗಿ ಕಂಗೊಳಿಸಲಿ !ನನ್ನ ಅಂತರಂಗ ತಮ್ಮ ಪಾದವನ್ನು ಧರಿಸಿ ಜಿನಾಲಯವಾಗಿ ಬೆಳಗಲಿ !ಐಶ್ವರ್ಯ್ಯ ನನಗೆ ಬೇಡ ಸ್ವಾಮಿ, ನನ್ನ ನಾಲಗೆ ಜಿನನಾಮದಲ್ಲಿ ಮಿಂದೇಳಲಿ !ನನ್ನ ಕಿವಿ ಜಿನಸ್ತುತಿಯನ್ನು ಸದಾ ಆಲಿಸಲಿ !ನನ್ನ ಹೃದಯ ಸಮವಸರಣವಾಗಿ ಜಿನೇಂದ್ರನ ಸಂಹಪೀಠವನ್ನು ತಳೆದು ಕಂಗೊಳಿಸಲಿ !ಜೈನಧರ್ಮ್ಮದ ಪ್ರಭಾವನೆಗಾಗಿ ಎಷ್ಟು ಬಾರಿ ಹುಟ್ಟಿ ಬಾ ಎಂದರೂ ನಾನು ಹುಟ್ಟಿ ಬರುವೆನು ಸ್ವಾಮಿ !" ಎಂದು ಅತ್ತಿಮಬ್ಬೆ ಆಚಾರ್ಯರ ಮುಂದೆ ಹೃದಯ ತುಂಬಿಬಂದು ಅತ್ತುಬುಟ್ಟಳು.

"ಅಮ್ಮಾಜಿ ನಿನ್ನ ಪರಿಣಾಮ ಸಾತ್ವಿಕವಾದುದು. ನಮ್ಮಂಥ ಯತಿಗಳೂ ನಿನ್ನ ದರ್ಶನಮಾಡಿ ಮಾರ್ಗ್ಗದರ್ಶ್ಶನ ಪಡೆಯಬೇಕು" ಎಂದು ಆಚಾರ್ಯ್ಯರು ಮನಸಾರೆ ನುಡಿದರು.

ಅತ್ತಿಮಬ್ಬೆ ಬಂಕಾಪುರದ ಆಶ್ರಮದಲ್ಲೇ ಕೆಲವು ದಿನ ನಿಂತು ಅಲ್ಲಿನ ಸ್ಥಿತಿಗತಿಗಳನ್ನು ಮನಗಂಡಳು. ತನ್ನ ಆಸ್ತಿಯಲ್ಲಿ ಅರ್ಧ್ಧಭಾಗವನ್ನು ಆಶ್ರಮಕ್ಕೆ ಬರೆದು ಕೊಟ್ಟಳು. ತಾನೆ ಅಡಿಗೆ ಮಾಡಿ ವಿದ್ಯಾರ್ಥ್ಥಿಗಳಿಗೆ ಬಡಿಸಿದಳು. ರೋಗದಿಂದ ನರಳುತ್ತಿದ್ದ ವಿದ್ಯಾರ್ಥ್ಥಿಗಳ ಸೇವೆ ಮಾಡಿದಳು. ಆಶ್ರಮವನ್ನು ತೊರೆದು ಬರುವಾಗ ಮತ್ತೊಮ್ಮೆ ಅಜಿತಸೇನಾಚಾರ್ಯ್ಯರನ್ನು ಕಂಡು "ಮಹಾಸ್ವಾಮಿ, ತಾವು ನಮ್ಮ ಸಮಾಜದ ರತ್ನಗಳನೆಲ್ಲ ಇಲ್ಲಿ ತಂದು ಸಾಣೆಯಿಡಿಯುತ್ತಿರುವಿರಿ ! ಈ ವಿದ್ಯಾಥಿಗಳಲ್ಲಿ ಎಂತೆಂಥ ಮೇಧಾವಿಗಳಿದ್ದಾರೋ ! ಯಾವಾಗ ಏನು ಬೇಕಾದರೂ ನನಗೆ ಹೇಳಿಕಳಿಸಿ . ಆವಶ್ಯಕತೆ ಕಂಡುಬಂದರೆ ಉಳಿದಿರುವ ಆಸ್ತಿಯನ್ನೂ ಕೊಟ್ಟುಬಿಡುವೆನು. ನಾನೂ ಪರಿಚಾರಿಕೆಯಾಗಿ ಆಶ್ರಮಕ್ಕೆ ಬರುವುದಕ್ಕೂ ಸಿದ್ಧ. ತಮ್ಮ ಪಾದದರ್ಶ್ಶನ ವಾಗುದಕ್ಕಿಂತ ಬೇರೆ ಪುಣ್ಯ ಇನ್ನೇನಿದೆ ? ರಾಜನಾಗಿ

ಸಿಂಹಾಸನದ ಮೇಲೆ ಕೂರು ವಿದಕ್ಕಿಂತ ಭಕ್ತಿಯಿಂದ ಸಮವಸರಣದ ಸ್ವಾರಪಾಲಕನಾಗಿ ನಿಂತೇನು ಸ್ವಾಮಿ !" ಎನ್ನು ಅತ್ತಿಮಬ್ಬೆ ಪುಲಕಿತಳಾಗಿ ನುಡಿದಳು.

"ಅಮ್ಮಯ್ಯ, ಒಂದೆರಡು ಜನ್ಮ ಸಮವಸರಣದ ದ್ವಾರಪಾಲಕನಾದರೆ ಅನಂತರ ಜಿನನಾಗುವ ಭಾಗ್ಯವನ್ನೂ ಪಡೆಯಬಹುದು !" ಎಂದು ಆಚಾರ್ಯರು ನಗುನಗುತ್ತ ತಿಳಿಸಿ ಕಾಲಿಗೆರಗಿದ ಅತ್ತಿಮಬ್ಬೆಯನ್ನೂ ಅಣ್ಣಿಗನನ್ನೂ ಆಶೀರ್ವಾದಮಾಡಿ ಕಳುಹಿಸಿ ಕೊಟ್ಟರು.